doc-345
T.P-2

(1)

51 st Year of Publication ★ SATYAVADI Daily, MYSORE 4

Reg No B G 155

31 - 7 - 1966

ಸಮುಖ ವತರ್ಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಪ್ರತಿಯೊಂದಕ್ಕೆ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

ಸ್ಥಾಪಕರು : ಅರಮನೆ ನಿವಾಸಿ ವೀರಶೈವ ಕುಲಪುರೋಹಿತರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

Space available

For Permanent Advertisement.

ನವೆಂಬರಿನಲ್ಲಿ ತಾಲ್ಲೋಕ್-ಬೋರ್ಡ್ ಚುನಾವಣೆ

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ), ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ ‘ಸತ್ಯವಾದಿ’
ಚಾಮರಾಜಪುರಂ, ಮೈಸೂರು 4.

ಮಕ್ಕಳ ಜನನ

ಕೊಲಂಬೊ— ಸಿಲೋನಿನಲ್ಲಿ ಸಿಂಹಾಲಿಗಳಲ್ಲಿ ಮಕ್ಕಳು ಕವ್ಮ್ಯಾಯಾಗಿಯೂ ತಮಿಳರಲ್ಲಿ ಹೆಜ್ಜಾಗಿಯೂ ಹುಟ್ಟುತ್ತಿವೆ.

★

ಪೆರ್ಷದಾರರಿಗೆ ಸಹಾಯ

ಮಂಗಳೂರು— ಮುನಿಸಿಪಲ್ ಸೇರಹದ್ದಿನಲ್ಲಿ ನಾಸಿಸುವ ಪೆರ್ಷದಾರರಿಗೆ ಸೃತ್ತಿ ತೆರಿಗೆ ಮನ್ನಾ ಮಾಡಲು ಪೌರಸಭೆ ನಿರ್ಧರಿಸಿದೆ.

ಮುಖ್ಯ ಮಂತ್ರಿಗಳ ಅನಿರೀಕ್ಷಿತ ಭೇಟಿ

ಚಂಡೀಘರ— ಪಂಜಾಬು ಮುಖ್ಯ ಮಂತ್ರಿ ಶ್ರೀ ಲೆಫ್ಟ್ನೆಂಟ್ ಸಿಂಗ್ ಗಿಲ್ ರು ಸರಕ್ಕಾರಿ ಕೆಜೇರಿಗೆ ಅನಿರೀಕ್ಷಿತ ಭೇಟಿ ಕೊಟ್ಟಾಗ, ಹಿರಿಯ ಅಧಿಕಾರಿಗಳು ತಡವಾಗಿ ಬರುವ, ಗೈರುಹಾಜರಾಗುವದು ಪತ್ತೆಯಾಯಿತು — ಇಬ್ಬರನ್ನು ಸಸ್ಪೆಂಡುಮಾಡಿ, ಮಿಕ್ಕವರಿಗೆ ಎಚ್ಚರಿಗ ನೀಡಿದರು.

ಸರ್ಕಾರದ ಕೈವಾಡ !

ತ್ರಿವೇಂದ್ರಂ— ಸನಲಕುಮಾರನೆಂಬ 6 ನೇ ತರಗತಿ ವಿದ್ಯಾರ್ಥಿ ನಾಪಾಸ್ ಆಗದಿಪ್ಪುರಿಂದ ಮುಂದಿನ ತರಗತಿಗೆ ಹಾಕಲಿಲ್ಲ. ಅವನ ತಂದೆ ಸರ್ಕಾರಕ್ಕೆ ಮನವಿ ಮಾಡಿಕೊಂಡ. ಹುಡುಗನನ್ನು ಮುಂದಿನ ತರಗತಿಗೆ ಸೇರಿಸಿಕೊಳ್ಳಲು ಸರಕಾರದ ಆಜ್ಞೆ ಬಂತು !

ದಾಳಿದೃಷ್ಟ

ಷಿಲಾಂಗ್— ಮಿಜೋಬೆಟ್ಟಗಳ ಜಿಲ್ಲೆಯ ಶಾಂತಿಭಂಗ ಪ್ರದೇಶವಾದ ಡಾರ್ಲ್ವಂಗಿಗೆ ಭಾರತ ವಿಮಾನದಳವವರು ಹಾಕುತ್ತಿರುವ ಆಹಾರ ಗಂಟುಗಳು ತಗಲಿ ಮೂರು ಮಂದಿ ಮಡಿದರು.

ಸ್ವಾಮಿಗೆ ಸಮರ್ಪಣೆ

ತಿರುಪತಿ— ಆಚಾರ್ಯ ಪಂಗಾಲಿ ಲಕ್ಷ್ಮೀಕಾಂತಂ ರವರು ತಮ್ಮ ಸಂಸ್ಕೃತ ವ್ಯಾಕರಣವನ್ನು ಶ್ರೀ ವೆಂಕಟೇಶ್ವರಸ್ವಾಮಿಗೆ ಸಮರ್ಪಿಸಿದರು.

ಸಂತತಿ ನಿಯಂತ್ರಣ

ಪೋಪರ ಸಂದೇಶ

ವಿಶ್ವಸಂಸ್ಥೆ— ಸಂತತಿ ನಿಯಂತ್ರಣ ಬಗ್ಗೆ ಪೋಪರ ಸಂದೇಶವು ಸೋಷಿಯಲ್ ಮತ್ತು ಡೆಮೊಗ್ರಾಫ್ ನಿಪುಣರಿಗೆ ಅತೃಪ್ತಿ ಮತ್ತು ವಿಷಾದ ಉಂಟಾಗಿದೆ— ಪೋಪರ ಸಂದೇಶವು ಕ್ಯಾಥಲಿಕರು ಸಂತತಿ ನಿಯಂತ್ರಣಕ್ಕೆ ಮಾತ್ರೆ ಮತ್ತಿತರ ಸಲಕರಣೆ ಉಪಯೋಗಿಸುವದನ್ನು ನಿಶೇಧಿಸಿದೆ — ನೀತಿ ಮಾರ್ಗ ಅನುಸರಿಸಬೇಕು — ಈ ಬಗ್ಗೆ ಪರ್ಯಾಲೋಚನೆಗಾಗಿ ಚರ್ಚುಗಳ ಮುಖಂಡರ ಸಮ್ಮೇಳನ ನಡೆಯಲಿದೆ.

★

ಮುಷ್ಕರ

ಬಳ್ಳಾರಿ— ಜುಲೈ ತಿಂಗಳ ತಮ್ಮ ವೇತನ ಹಿಡಿದಿರುವದರಿಂದ ಅವನ್ನು ಪ್ರತಿಭಟಿಸಿ, ಬಳ್ಳಾರಿ ಮೆಡಿಕಲ್ ಕಾಲೇಜು ಹೌಸ್ ಸರ್ಜರು ನಿನ್ನೆ ಕೆಲಸಕ್ಕೆ ಹಾಜರಾಗಲಿಲ್ಲ.

★

ಎಂಜಿನೀರಿಂಗ್ ವಿದ್ಯಾರ್ಥಿಗಳಿಲ್ಲ

ಬಾಗಲಕೋಟೆ— ಸ್ಥಳೀಯ ಪಾಲಿಟೆಕ್ನಿಕ್ನಲ್ಲಿ ಎಂಜಿನೀರಿಂಗಿನ 90 ಸ್ಥಾನಗಳಲ್ಲಿ 9 ಮಾತ್ರ ಭರ್ತಿಯಾಗಿದೆ.

★

ಎಂ ಪಿ ಸಿ ಸಿ

ಬೆಂಗಳೂರು— ಬೀದರಿನಲ್ಲಿ ಆಗಸ್ಟ್ 4 ರಂದು ನಡೆಯುವ ಎಂ ಪಿ ಸಿ ಸಿ ಅಧಿವೇಶನದಲ್ಲಿ ರಾಜ್ಯದ ಗಡಿ ಸಮಸ್ಯೆ ಮತ್ತಿತರ ವಿಷಯಗಳ ಬಗ್ಗೆ ಅಧಿಕೃತ ನಿರ್ಣಯಗಳಾಗುವ ಸಂಭವವಿದೆ — ಅಧ್ಯಕ್ಷರ ಮತ್ತು ಮುಖ್ಯ ಮಂತ್ರಿಗಳ ಮೆರವಣಿಗೆ ನಡೆಯಲಿದೆ — ಎಂ ಪಿ ಸಿ ಸಿ ಯು ಸೆಪ್ಟಂಬರು ಕಡೆ ವಾರದಲ್ಲಿ ರಾಜ್ಯದ ರಾಜಕೀಯ ಸಮ್ಮೇಳೆದ ಏರ್ಪಡಿಸಲಿದೆಯೆಂದು ಅಧ್ಯಕ್ಷ ಡಾ || ನಾಗಪ್ಪ ಆಳ್ವರು ತಿಳಿಸಿರುವರು.

ತಾಲೋಕು ಬೋರ್ಡು ಚುನಾವಣೆ

ಬೆಂಗಳೂರು— ರಾಜ್ಯದ ತಾಲ್ಲೋಕು ಅಭಿವೃದ್ಧಿ ಬೋರ್ಡಿಗೆ ನವೆಂಬರು 23 ರಿಂದ 30 ರವರೆಗೆ ಚುನಾವಣೆ ನಡೆಸಲು ಸರಕಾರ ನಿರ್ಧರಿಸಿದೆ. — 174 ತಾಲ್ಲೋಕ ಬೋರ್ಡುಗಳಿಗೂ ಕಾಂಗ್ರೆಸ್ಸು ಉಮೇದಾರರನ್ನು ನಿಲ್ಲಿಸುವದೆಂದು ಪರದಿಯಾಗಿದೆ.

★

ಕಾಂಗ್ರೆಸ್ ಅಧ್ಯಕ್ಷರು

ಸೋಕಿಯೋ— ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ನೇತಾಜಿ ಸುಭಾಶ್ ಚಂದ್ರ ಬೋಸರ ಚಿತಾಭಸ್ಮವಿಟ್ಟಿರುವ ರೇಂಕೇಜಿ ದೇವಾಲಯಕ್ಕೆ ನಿನ್ನೆ ಸಂಜೆ ಭೇಟಿಕೊಡುವ ಏರ್ಪಾಡಿತ್ತು.

★

ಅಧ್ಯಕ್ಷರ ಆಡಳಿತ

ನವದೆಹಲಿ— ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಆರು ತಿಂಗಳು ಮುಂದುವರಿಸಲು ಸರ್ಕಾರ ನಿರ್ಧರಿಸಿದೆ.

★

ಷೇಕ್ ಅಬ್ದುಲ್ಲರು

ಕೊಲಂಬೊ— ಸಿಲೋನಿನ ಇಸ್ಲಾಮಿಕ್ ರಂಗದ ದ್ವಿತೀಯೆ ವಾರ್ಷಿಕೋತ್ಸವ ಸಂದರ್ಭದಲ್ಲಿ ಷೇಕ್ ಅಬ್ದುಲ್ಲರು ಆಹ್ವಾನಿಸಲಾಗಿದು, ಸಿಲೋನಿಗೆ ಭೇಟಿ ಕೊಡಲಿರುವರು.

★

ತೇಲುವ ಇಟ್ಟಿಗೆ

ವಾರ್ಧಾ— ವಿದರ್ಭಾದ ತಿಲೆಗಾಂವ್ನಲ್ಲಿ ಭೂಮಿಯನ್ನು ಅಗೆಯುತ್ತಿದ್ದಾಗ ಕ್ರಿ. ಶ. 300 ರ ತೇಲುವ ಇಟ್ಟಿಗೆಗಳು ಸಿಕ್ಕಿವೆ — ಇವು ಸಾಧಾರಣ ಧಾನ್ಯಕ್ಕಿಂತ ತೂಕವಿಲ್ಲ.

★

ಹಿಂದೂಗಳ ಆಚಾರ

ಸಂಗ್ರಹಕರು— "ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

★

(ಮುಂದುವರಿದುದು)

ಪೂರ್ವಕಾಲದಲ್ಲಿ ದ್ವಿಜರಿಗೆ ಐದನೇ ವರ್ಷ ಚೂಡಾಕರ್ಮ ನಡೆಯುತ್ತಿತ್ತು. ಆನಂತರ ಬಾಲಕನು ಸ್ವಲ್ಪಮಟ್ಟಿನ ಆಚಾರಗಳನ್ನು ಅನುಸರಿಸಬೇಕಾಗುತ್ತಿತ್ತು. ಎಂಟನೇ ವರ್ಷ ಉಪನಯನವಾಯಿತೆಂದರೆ ತನ್ನ ವರ್ಣಕ್ಕೆ ಅನುಸಾರವಾಗಿ ಆಚಾರಗಳನ್ನು ತಪ್ಪದೇ ಅನುಸರಿಸಬೇಕಾಗುತ್ತಿತ್ತು. ಉಪಾಕರ್ಮಾನಾದನಂತರ ವೇದಾಧ್ಯಯನಕ್ಕೆ ಪ್ರಾರಂಭಿಸಬೇಕಾಗುತ್ತಿತ್ತು. ಬಹಳ ಈಚಿನವರೆಗೂ ಪ್ರತಿಯೊಬ್ಬ ಬ್ರಾಹ್ಮಣನೂ ಸಾಧ್ಯವಾದಷ್ಟು ವೇದಾಧ್ಯಯನ ಮಾಡಬೇಕೆಂಬ ನಂಬಿಕೆ ಇತ್ತು. ಆದರೆ ಈಗ ಈ ರೀತಿಯ ಯಾವುದೇ ಸಂಸ್ಕಾರವೂ ಬಾಲ್ಯದಲ್ಲಿ ನಡೆಯುವುದಿಲ್ಲ. ಇಪ್ಪತ್ತು ವರ್ಷಗಳಾದಮೇಲೆ ಕೇವಲ ಜನ್ಮ ಪೆಜ್ಜಿಕೆಗಾಗಿ ಉಪನಯನ ಮಾಡಿದಲ್ಲಿ ಅಲ್ಲಿಂದ ಮುಂದೆ ಆಚಾರಗಳನ್ನು ಹೊಸದಾಗಿ ನಡೆಸಬೇಕೆಂದರೆ ಸಾಧ್ಯವಾಗಲಾರದು. ಅದುವರೆಗೆ ಅವನು ಆಚಾರದ ಯಾವುದೇ ಕಟ್ಟುಪಾಡು ಇಲ್ಲದೇಇದ್ದುದರಿಂದ, ಮೇಲಾಗಿ ಅವನು ಅದೇರೀತಿ ಇರುವಂತೆ ಬುದ್ಧಿಯು ಪ್ರಚೋದನೆ ಮಾಡುತ್ತದೆ. ಇಂಥವರಲ್ಲಿ ಹೆಚ್ಚು ಜನರಿಗೆ ಆಚಾರಗಳಲ್ಲಿ ತಿರಸ್ಕಾರಭಾವನೆ ಇರುವುದರಿಂದ, ಇಷ್ಟಿವ ಕ— ಸಹವಾಸ ಮಾಡುವವರೂ ಸಹ ಆಚಾರಗಳನ್ನು ನಡೆಸಲು ಸಾಧ್ಯವಾಗದು.

ಆರು ಮಿಲಿಯ ಸ್ತ್ರೀಸೈನ್ಯ— ಯುದ್ಧಕ್ಕಲ್ಲ, ತಮ್ಮ ಹಕ್ಕುಗಳನ್ನು ಪಡೆಯಲು

ಬೋನ್‌ನ ಹತ್ತಿರವಿರುವ ಬೆಡ್‌ಗೊಡ್ಸ್‌ಬರ್ಗ್ ಎಂಬಲ್ಲಿರುವ 'ಜರ್ಮನ್ ಸ್ತ್ರೀ ಸಂಘಗಳ ಸ್ತ್ರೀ ಪ್ರತಿನಿಧಿಗಳ, ನರ್ತಮಾನ ಸೇವೆ ಮತ್ತು ಕಾರ್ಯನಿರ್ವಾಹಕ ಸಮಿತಿ' ಗೆ ಸಾಟಿಯಾದ ಜೀರೊಂದು ಸಂಸ್ಥೆ ಇಲ್ಲವೆನ್ನಬಹುದು — ಆರು ಮಿಲಿಯ ಸ್ತ್ರೀ ಸೈನ್ಯ ತಮ್ಮ ಅಭಿಪ್ರಾಯವನ್ನು ಸ್ತ್ರೀಯರ ಉದ್ಧಾರಕ್ಕಾಗಿ ತೆತ್ತು ತಮ್ಮ ಹಕ್ಕನ್ನು ಪಡೆಯಲು ಪ್ರಯತ್ನಿಸುತ್ತಿದೆ. (ಐ ಪಿ ಎಫ್)

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

ಆಶೋಕ ಟಾಕೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಅಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ವುಡ್‌ಲಾಂಡ್ಸ್ ಆಪೋಷ 5 ನೇ ವಾರ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ಪ್ರತಿನ 3 ಪ್ರದರ್ಶನಗಳು]

ಆಪೇರ— ಜನವರಿಯ 4 ನೇ ವಾರ

ಚಿತ್ತಾಕರ್ಷಕ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಡಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣಕ್ಕೆ ಬೆಂಬಲ ನೀಡಿ

ಶ್ರೀದಕ್ಷಿಣಾಮ್ನಾಯ ಜಗದ್ಗುರು ಪೂಜ್ಯಪಾದ ಶ್ರೀಮದ್ಗಳವರು ಶ್ರೀ ಶೃಂಗೇರಿ ಜಗದ್ಗುರು ಪೂಜ್ಯಪಾದ ಶ್ರೀಮದ್ಗಳವರು ಉದಾರ ಅನುಗ್ರಹ ಕೃಪೆಯಾಗಿದೆ.

ಕರ್ನಾಟಕದಲ್ಲಿ ಗೋರಕ್ಷಣೆ, ಹಾಲಿಗೆಯೆ, ತಕ್ಷಣಾಹಾರ, ಪಶುವೈದ್ಯ ಮಾಡಲಾಗಿ ಎಲ್ಲರ ಸಹಾಯ ಸಹಕಾರ ಅಪೇಕ್ಷಿಸಿದೆ : ವಾರ್ಷಿಕ ಚಂದಾ 50 ಪೈಸೆ

— ಹೆಚ್ಚಿನ ವ್ಯವಸಾಯಕರ ವಿನಂತಿ —

ಗೋರಕ್ಷಣೆಗೆ ಕೊಟ್ಟುಸಲಹೆಗಳನ್ನೂ ಪ್ರೋತ್ಸಾಹ ಧನವನ್ನೂ ದಾಂಡಸಾಮರ್ಪಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇದರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾಳ್ ಪಿ ಎಸ್ ನಾರಾಯಣ್, ಶ್ರೀ ಪಿ.ಎಸ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ. ಶಾಸ್ತ್ರಿಗಳು, 1080 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಸಗನ್ನಡ

ಗೋರಕ್ಷಣ ಅಫೀಸ್ ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣ ಅಫೀಸು 1087 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮಾಡಿ, ಸಾಧ್ಯವಿದ್ದಷ್ಟು ಕಾಣಿಕೆಗಳನ್ನು ಹಣ್ಣೆ ಚಾಚಿ ನಡೆಯಿರಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 4